ಮೈಸೂರು ಜಿಲ್ಲೆಯ ವಿವಿಧ ಅಕಾಡಮಿಗಳು ಮಾಡಿರುವ ಖರ್ಚು.

1509(2171)

ಶ್ರೀ ಎ.ಎಸ್.ಗುರುಸ್ವಾಮಿ(ಚಾಮುಂಡೇಶ್ವರಿ): ಸನ್ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಒಂದು ವರ್ಷದ ಅವಧಿಯಲ್ಲಿ ಮೈಸೂರು ಜಿಲ್ಲೆ ಹಾಗೂ ತಾಲ್ಲೂಕಿಗೆ ಸಂಬಂಧಪಟ್ಟಂತೆ ವಿವಿಧ ಅಕಾಡೆಮಿಗಳು ಮಾಡಿರುವ ಖರ್ಚು ಎಷ್ಟು?

ಆ) ಎಲ್ಲಿ ಎಲ್ಲಿ ಯಾವ ಕಾರ್ಯಕ್ರಮಗಳಿಗಾಗಿ ಖರ್ಚುನ್ನು ಮಾಡಲಾಗಿದೆ. ಅದರಿಂದ ಉಂಟಾದ ಪ್ರಯೋಜನವೇನು?

ಇ) ಗ್ರಾಮೀಣ ಪ್ರದೇಶದಲ್ಲಿ ವಿವಿಧ ಅಕಾಡೆಮಿಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ಇಲಾಖಾ ರಾಜ್ಯ ಸಚಿವರು):

ಅ)	ಅಕಾಡೆಮಿಗಳು		ಆಗಿರುವ ಖರ್ಚು
			ರೂ.
1)	ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ	-	50,000-00
2)	ಕರ್ನಾಟಕ ಸಾಹಿತ್ಯ ಅಕಾಡೆಮಿ	-	- ಇಲ್ಲ -
3)	ಕರ್ನಾಟಕ ನಾಟಕ ಅಕಾಡೆಮಿ	-	- ಇಲ್ಲ -
4)	ಕರ್ನಾಟಕ ಲಲಿತಕಲಾ ಅಕಾಡೆಮಿ	-	1,91,439-00
5)	ಕರ್ನಾಟಕ ಉರ್ದು ಸಾಹಿತ್ಯ ಅಕಾಡೆಮಿ	-	- ಇಲ್ಲ-
6)	ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ	-	30,000-00
7)	ಕರ್ನಾಟಕ ಶಿಲ್ಪಕಲಾ ಅಕಾಡೆಮಿ	-	48,966-00
8)	ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ	-	24,549-00
9)	ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ	-	- ಇಲ್ಲ -

10) ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ	-	- ಇಲ್ಲ -
ಒಟ್ಟು ರೂ.		3,44,954-00

ಆ) 1. 1) ಕರ್ನಾಟಕ ಸಂಗೀತ:ನೃತ್ಯ ಅಕಾಡೆಮಿ: ಮೈಸೂರಿನಲ್ಲಿ ಸಂಗೀತ ನೃತ್ಯ, ಹರಿಕಥೆ ಗಮಕ ಕ್ಷೇತ್ರಗಳಲ್ಲಿ ಶಿಷ್ಯವೇತನ ನೀಡಲು ಶಿಷ್ಯವೇತನ ಸಂದರ್ಶನ ಕಾರ್ಯಕ್ರಮ - ಶಿಷ್ಯವೇತನ ನೀಡಿದ ಮೊತ್ತ ರೂ. 5000-00

2. ಅ) ಕರ್ನಾಟಕ ಲಲಿತಕಲಾ ಅಕಾಡೆಮಿ: ದಿನಾಂಕ: 4.2.2000 ದಂದು, ಡಾ:ಶ್ರೀ ಶಿವರಾತ್ರಿ ರಾಜೇಂದ್ರ ಭವನ, ಮೈಸೂರು ಇಲ್ಲಿ ಲಲಿತ ಕಲೆಯಲ್ಲಿ ಅನುಪಮ ಸೇವೆ ಸಲ್ಲಿಸಿರುವ ಗಣ್ಯರಿಗೆ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ ಪ್ರಧಾನ ಸಮಾರಂಭ ಇದರ ವೆಚ್ಚ ರೂ. 1,27,105-00

ಆ) ದಿನಾಂಕ:29.5.2000ದಿಂದ 4.6.2000ದವರೆಗೆ ಮೈಸೂರಿನ ಕಲಾ ಮಂದಿರದಲ್ಲಿ 31 ಮಂದಿ ಹಿರಿಯ ಕಲಾವಿದರ ಕಲಾಕೃತಿಗಳ ಪ್ರದರ್ಶನ ಇದರ ವೆಚ್ಚ ರೂ. 64,334-00.

3. ಅ) ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ: ದಿನಾಂಕ: 19.8.2000 ಮತ್ತು 20.8.200ದಂದು ಮೈಸೂರು ಜಿಲ್ಲೆ ನಂಜನಗೂಡಿನಲ್ಲಿ ಕಲಾವಿದರ 'ನೋವು ನಲಿವು' ಆತ್ಮಕತೆಗಳ ನಿರೂಪಣಾ ಶಿಬಿರ, ಇದರ ವೆಚ್ಚ ರೂ. 20,000-00.

ಆ) ಮೈಸೂರಿನ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಸಭಾಂಗಣದಲ್ಲಿ ದಿನಾಂಕ:21.10.2000ದಂದು ''ಜಾನಪದ ಸಾಹಿತ್ಯದಲ್ಲಿ ನಾಯಕಿಯರು'' ವಿಚಾರ ಸಂಕಿರಣ ಕಾರ್ಯಕ್ರಮ ಇದರ ವೆಚ್ಚ ರೂ. 5000-00

ಇ) ದಿನಾಂಕ:23.12.2000 ದಂದು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ಇಲ್ಲಿ ''ಜಾನಪದ ಕಲೆಗಳ ವಿಚಾರ ಸಂಕಿರಣ'' ಕಾರ್ಯಕ್ರಮ ಇದರ ವೆಚ್ಚ ರೂ. 5000-00

4. ಕರ್ನಾಟಕ ಶಿಲ್ಪಕಲಾ ಅಕಾಡೆಮಿ: ದಕ್ಷಿಣವಲಯ ಸಾಂಸ್ಕೃತಿಕ ಕೇಂದ್ರ, ತಂಜಾವೂರು ಇವರ ಸಂಯುಕ್ತ ಆಶ್ರಯದಲ್ಲಿ ದಿನಾಂಕ:3.11.2000 ದಿಂದ 12.11.2000ದವರೆಗೆ ಮೈಸೂರಿನ ಚಾಮರಾಜೇಂದ್ರ ತಾಂತ್ರಿಕ ಕಲಾ ಶಾಲೆಯಲ್ಲಿ 'ಅಖಿಲ ಭಾರತ ಶಿಬಿರ' ಕಾರ್ಯಕ್ರಮ ಇದರ ವೆಚ್ಚ ರೂ. 48,966-00

5. ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ:

1) ದಿನಾಂಕ: 16.7.2000 ದಂದು ದಕ್ಷಿಣ ಕನ್ನಡ ಜಿಲ್ಲಾ ಸಂಘ(ರಿ) ಮೈಸೂರು ಇವರ ಸಹಯೋಗದೊಂದಿಗೆ, ಒಂದು ದಿನದ ತುಳು ಉತ್ಸವ, ಸಾಹಿತ್ಯ, ಸಾಂಸ್ಕೃತಿಕ ವಿಚಾರಗೋಷ್ಠಿ ಕಾರ್ಯಕ್ರಮ ನಡೆಸಲಾಗಿದೆ. ಇದರ ವೆಚ್ಚ ರೂ. 24,549-00.

2) ನಾಡಿನ ಕಲೆ, ಸಾಹಿತ್ಯ, ಲಲಿತಕಲೆ ಮತ್ತು ಸಂಸ್ಕೃತಿಯನ್ನು ಪ್ರೋತ್ಸಾಹಿಸುವುದು.

ಇ) ನಾಡಿನ ಕಲೆ, ಸಂಸ್ಕೃತಿ, ಸಾಹಿತ್ಯ, ಲಲಿತಕಲೆಗಳನ್ನು ಪ್ರೋತ್ಸಾಹಿಸಲು ಮತ್ತು ಸಂರಕ್ಷಿಸಲು ಅಲ್ಲದೆ ಗ್ರಾಮೀಣ ಪ್ರದೇಶಗಳ ಜಾನಪದ ಕಲೆ, ಸಾಹಿತ್ಯ ಸಂಸ್ಕೃತಿಯನ್ನು ಪ್ರೋತ್ಸಾಹಿಸಿ ಸಂರಕ್ಷಿಸಲು ಸರ್ಕಾರ ವಿವಿಧ 10 ಅಕಾಡೆಮಿಗಳನ್ನು ಪುನರ್ ರಚಿಸಿದೆ. ಅಲ್ಲದೆ ಎಲ್ಲಾ ಅಕಾಡೆಮಿಗಳಿಗೂ ವಾರ್ಷಿಕ ಅನುದಾನವನ್ನು ನೀಡಲಾಗುತ್ತಿದೆ.

ಕುಂತೂರು ಸಕ್ಕರೆ ಕಾರ್ಖಾನೆಯ ಮಾಲೀಕರ ಬದಲಾವಣೆ.

1510 (2322)

ಶ್ರೀ ಗುರುಸ್ವಾಮಿ ಎ.ಎಸ್.(ಚಾಮುಂಡೇಶ್ವರಿ): ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂತೂರು ಸಕ್ಕರೆ ಕಾರ್ಖಾನೆ ಕಳೆದ ಒಂದು ವರ್ಷದಲ್ಲಿ 2-3 ಮಾಲೀಕರು ಬದಲಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದರೆ ಕಾನೂನು ರೀತ್ಯ ಬದಲಾಗಿದೆಯೇ; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಇ) ರೈತರಿಗೆ ಕೊಡುವ ಕಬ್ಬಿನ ಹಣ ಎಷ್ಟು ಬಾಕಿ ಇದೆ. ಒಪ್ಪಂದದ ಪ್ರಕಾರ ಈ ಹಿಂದೆ ಎಷ್ಟು ಹಣ ಪಾವತಿಯಾಗಿದೆ? (ವಿವರ ನೀಡುವುದು)

ಶ್ರೀ ಎ.ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು):

ಅ) ಬಂದಿದೆ.

ಆ) ಕುಂತೂರಿನ ಸಕ್ಕರೆ ಕಾರ್ಖಾನೆಯು ಒಂದು ಖಾಸಗೀ ವಲಯದ ಕಾರ್ಖಾನೆಯಾಗಿದ್ದು, ಅದರ ಮಾಲೀಕತ್ವದ ಬದಲಾವಣೆ ಸಂಪೂರ್ಣವಾಗಿ ಆಯಾ ಮಾಲೀಕರ ನಿರ್ಧಾರದಂತೆ ನೆರವೇರುವಂತಹುದಾಗಿದೆ. ಆದ್ದರಿಂದ ಈ ಹಂತದಲ್ಲಿ